Regd No. M 1299 ॥ सत्यान्नास्ति सरोधर्मः ॥ ಬಿಡಿ ಸಂಚಿಕೆ ೩ ಪೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 ಸ್ಥಳಕ್ಕೆ (ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) ವರ್ಷಕ್ಕೆ ರೂ. 1—10—0 ಪರಸ್ಥಳಕ್ಕೆ

ಪ್ರತಿ ಬುಧವಾರ ಪ್ರಕಟಿಸಲ್ಪಡುವದು

ಸಂಪುಟ 19] ॥ ಮೈಸೂರು, ಬುಧವಾರ 25 ನೆ ಮಾರ್ಚ್ 1936 [ಸಂಚಿಕೆ 28

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! - ಮೈಸೂರು ಟೂತ್‌ಪೇಸ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ ಕ್ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಲ್ಲಿರುವ ಬಹುವಾದ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಯವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತರ್ಕುಳ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಬಂದಾವರ್ತಿಪರಿಕ್ಷಿಸಿ ನೋಡಬೇಕಾದ್ದು. ಟಿ ಕ್ 1 ಕ್ಕೆ 5 ಆಣೆ.

[ಇದಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷ್ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್
Manufg Chemists Druggists & Physician

ಮಳವಳ್ಳಿ ಏಜೆಂಟರು :
ಮಿ| ಜಿ. ಎಸ್. ವೆಂಕಟರಾವ್

ಅಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Season Deposits

Not exceeding Rs. 25,000 and falling below Rs. 500 from any one individual are received at Head Office and Branches of the Quilon Bank, Limited, from 15 th March to 15 th May, 1936, maturing from June to August at 3½ per cent interest per Annum.

Remittances received at par at all Branches and Agencies.

The Quilon Bank

(Incorporated in Travancore, 1919)

Subscribe for & Advertise in The Progressive MYSORE

ಜೀವಶಾಸ್ತ್ರದ ಕ್ರಮಗಳು

ಸತ್ತವರೊಡನೆ ಮಾತನಾಡುವ ಮಾರ್ಗಗಳು

(ಲೇಖಕರು—"ಕೆ." ಯವರು)

[ಸಕಲ ಹಕ್ಕುಗಳನ್ನು ಲೇಖಕರು ಹೊಂದಿರುತ್ತಾರೆ]

ಆವೇಶನಾಗುವು ಜೀವಸಂಭಾಷಣೆಯ ಮಾರ್ಗಗಳಲ್ಲಿ ಒಂದು ಮುಖ್ಯ ಮಾರ್ಗವಾಗಿದೆ. ಈ ಮಾರ್ಗದಲ್ಲಿ, ವಿಶೇಷ ಸೂಕ್ಷ್ಮಶಕ್ತಿಯುಳ್ಳ ಮಿಡಿಯಂಗಳು ಭಾಗವಹಿಸಬೇಕು. ಈ ಮಾರ್ಗದ ಕ್ರಮವೇನೆಂದರೆ—ಜೀವಸಂಭಾಷಣೆ ನಡೆಸುವವರೆಲ್ಲರೂ ಒಂದು ಕೊಠಡಿಯಲ್ಲಿ ಸೇರಿ, ಮಿಡಿಯಂ ಒಬ್ಬನನ್ನು ತಮ್ಮ ಮಧ್ಯೆ ಕೂರಿಸಿ ಇತರ ಸಂಭಾಷಣಾ ಮಾರ್ಗಗಳಂತೆಯೇ ಕೈಗಳನ್ನು ಜೋಡಿಸಬೇಕು. ಸತ್ತವರನ್ನು ಕೂಗಿ ಕರೆಯುತ್ತಿರಬೇಕು. ಹೀಗೆ ಮಾಡಿದರೆ ಸೂಕ್ಷ್ಮಶಕ್ತಿಯುಳ್ಳ ಮಿಡಿಯಂಗಿರುವವರು, ಒರುತ್ತಾ ಬರುತ್ತಾ ಒಂದು ತರಹ ಮೂರ್ಛಾವಸ್ಥೆಯುಳ್ಳವರಾಗುತ್ತಾರೆ. ಹಾಗೆಯೇ ಪ್ರಜ್ಞೆ ತಪ್ಪುವುದು. ತಮ್ಮ ವ್ಯಕ್ತಿತ್ವವನ್ನು ಮರೆಯುತ್ತಾರೆ. ಈ ಸ್ಥಿತಿಯಲ್ಲಿ ಘಾಬರಿಪಡಬಾರದು. ಸತ್ತವರನ್ನು ಪ್ರೀತಿಯಿಂದ ಕರೆಯುತ್ತಲೇ ಇರಬೇಕು. ಸ್ವಲ್ಪ ಹೊತ್ತಾದಮೇಲೆ ಮೂರ್ಚಾವಸ್ಥೆಯಲ್ಲಿರುವ ಮಿಡಿಯಂ ಅವರನ್ನು, ನಿಮ್ಮ ಹೆಸರೇನೆಂದು ಕೇಳಿದರೆ, ನಾವು ಯಾವ ಸತ್ತವರೊಡನೆ ಸಂಭಾಷಿಸಬೇಕೆಂದು ಇರುತ್ತೇವೋ ಅವರ ಹೆಸರನ್ನೇ ಹೇಳುತ್ತಾರೆ ಆಗ ಸತ್ತವರು, ಮಿಡಿಯಮ್ಮಿನ ದೇಹವನ್ನು ತಾತ್ಕಾಲಿಕವಾಗಿ, ತಮ್ಮ ಸ್ವಾಧೀನಪಡಿಸಿಕೊಂಡಿರುತ್ತಾರೆಂದು ತಿಳಿಯಬೇಕು. ನಮಗೆ ಬೇಕಾದ ಪ್ರಶ್ನೆಗಳನ್ನು ಕೇಳಿದರೆ ಅವುಗಳಿಗೆ ಸರಿಯಾದ ತೃಪ್ತಿಕರವಾದ ಉತ್ತರಗಳನ್ನು ಮೂರ್ಛಾವಸ್ಥೆಯಲ್ಲಿಯೇ ಹೇಳುತ್ತಾರೆ. ಸಂಭಾಷಣೆಯು ಮುಗಿಯುತ್ತಲೇ, ಮಿಡಿಯಂಗಳು, ಪುನಃ ಮೂರ್ಛೆಯಲ್ಲಿದ್ದು, ಕ್ರಮೇಣ ನಿದ್ರೆಯಿಂದ ಎಚ್ಚರವಾದಂತೆ ಕಣ್ಣನ್ನು ತೆರೆದು ಮೊದಲಿನಂತೆಯೇ ಮಾತನಾಡುತ್ತಾರೆ. ಮತ್ತು ಈ ಮಧ್ಯ ತಮ್ಮ ದೇಹವನ್ನು ಸ್ವಾಧೀನಪಡಿಸಿಕೊಂಡು ಸತ್ತವರು ಸಂಭಾಷಣೆ ನಡೆಸಿದ ವಿಚಾರವನ್ನೇ ಅವರು ತಿಳಿದಿರುವುದಿಲ್ಲ. ಹೀಗೆ ಸ್ವಲ್ಪಕಾಲ ಒಂದು ಮನುಷ್ಯ ದೇಹವನ್ನು ಸ್ವಾಧೀನಪಡಿಸಿಕೊಂಡು ಅದರ ಮುಖಾಂತರವಾಗಿ ನಮ್ಮೊಡನೆ ಸಂಭಾಷಣೆ ನಡೆಸುವ ಮಾರ್ಗವೇ ಆವೇಶಮಾರ್ಗವೆನಿಸುತ್ತದೆ. ಇದರಲ್ಲಿ ಮಿಡಿಯಂ ಆಗಿರುವವರು, ಸ್ವಲ್ಪಕಾಲ ಆವೇಶದಿಂದವರಾತ, ತಮ್ಮ ವ್ಯಕ್ತಿತ್ವವನ್ನು ಮರೆತು, ಸತ್ತವರು ಅವರ ದೇಹದ ಮುಖಾಂತರವಾಗಿ ನಮ್ಮೊಡನೆ ಮಾತನಾಡುತ್ತಾರೆ.

ಇದಲ್ಲದೆ, ಜೀವಶಾಸ್ತ್ರ ತತ್ವಗಳ ನಿಜಾಂಶವನ್ನು ಸ್ಥಿರಪಡಿಸುವ ಮಾರ್ಗವು ಬೇರೊಂದಿರುತ್ತದೆ ಈ ಮಾರ್ಗವನ್ನು ಯಾರು ಬೇಕಾದರೂ ಎಲ್ಲಿಯಾದರೂ ಅಭ್ಯಾಸಿಸಬಹುದು. ಇದರಿಂದ ಎಂಥವರಿಗೂ ಸತ್ತವರು ಜೀವರೂಪದಲ್ಲಿ ಇರುವುದನ್ನು ಸಾಕಷ್ಟು ತೃಪ್ತಿಗಾಗಿ ನಿದರ್ಶಿಸಬಹುದು. ಈ ಮಾರ್ಗದಲ್ಲಿ, ಮಿಡಿಯಂ ಅಂದರೆ ವಿಶೇಷ ಸೂಕ್ಷ್ಮಶಕ್ತಿಯ ಳ್ಳವರು ಭಾಗವಹಿಸುವುದು ಉತ್ತಮ. ಈ ಮಾರ್ಗವೇನೆಂದರೆ—ಮರಣಹೊಂದಿರುವವರ ಪ್ರಿಯಬಂಧುಗಳೆಲ್ಲರೂ, ಮಿಡಿಯಂ ಅವರನ್ನು ತಮ್ಮ ಮಧ್ಯೆ ಕೂರಿಸಿಕೊಂಡು, ಸಾಲಾಗಿ ಫೋಟೋತೆಗೆಸಿಕೊಳ್ಳುವುದಕ್ಕೆ ನಿಲ್ಲುವಂತೆ ನಿಲ್ಲಬೇಕು. ಇವರ ಫೋಟೋವನ್ನು ಛಾಯಾಗ್ರಾಹಿಯ ಯಂತ್ರದ ಸಹಾಯದಿಂದ ತೆಗೆಯಬೇಕು. ಹೀಗೆ ಫೋಟೋ ತೆಗೆಯುವುದಕ್ಕೆ ಮೊದಲು ಸ್ವಲ್ಪ ಹೊತ್ತು ದೇವರನ್ನು ಧ್ಯಾನಿಸಿ ಅನಂತರ ಸತ್ತವರನ್ನು ಪ್ರೀತಿಯಿಂದ ಕೂಗಿ ಕರೆದು, ತಮ್ಮೊಡನೆ ನಿಲ್ಲಬೇಕೆಂದು ಪ್ರಾರ್ಥಿಸಬೇಕು. ಹೀಗೆ ಪ್ರಾರ್ಥಿಸುತ್ತಿರುವಾಗಲೇ ಫೋಟೋವನ್ನು ತೆಗೆಯಬೇಕು. ಆ ಫೋಟೋವಿನ ಪ್ಲೇಟನ್ನು ದ್ರಾವಕಗಳಿಂದ ತೊಳೆದು ನೋಡಿದುದೇ ಆದರೆ ಅದರಲ್ಲಿ ಎದುರಿಗೆ ಕೂತಿದ್ದವರ ಛಾಯಾಚಿತ್ರಗಳ ಜೊತೆಗೆ, ಮೇಲ್ಭಾಗದಲ್ಲಿ ಒಂದು ಹೆಸರಾದ ಭಾವಚಿತ್ರವು ಕಾಣುವುದು. ಇದೇ ಸತ್ತವರ ಭಾವಚಿತ್ರವು. ದ್ರಾವಕಗಳಿಂದ ತೊಳೆದ ಫೋಟೋವಿನಿಂದ ಪ್ರಿಂಟ್ ಹಾಕಿ ನೋಡಿದರೆ ಸತ್ತವರ ಭಾವಚಿತ್ರವು ಸ್ಪಷ್ಟವಾಗಿ ಕಾಣುವುದು. ಅದನ್ನು ಅಂಥವರೇ ಎಂದು ಗುರ್ತಿಸಬಹುದು, ಆ ರೀತಿ ಸತ್ತವರು, ಫೋಟೋ ತೆಗೆಯುವಾಗ ನಮ್ಮ ದೃಷ್ಟಿಗೋಚರವಾಗುವುದಿಲ್ಲ. ಫೋಟೋ ತೆಗೆದಾದ ಮೇಲೆ ಆ ಛಾಯಾಚಿತ್ರದಲ್ಲಿ, ಸತ್ತವರ ಭಾವಚಿತ್ರವೂ ಇರುವುದು ಇದರಿಂದ ಜೀವಶಾಸ್ತ್ರವು ಘಂಟಾಘೋಷವಾಗಿ ಸಾರುತ್ತಿರುವ, ಮರಣವೇ ಮನುಷ್ಯನ ವ್ಯಕ್ತಿತ್ವವನ್ನು ಅಳಿಸುವುದಿಲ್ಲವೆಂಬ ತತ್ವವನ್ನು ಸಂಬಲೇ ಬೇಕಾಗುತ್ತದೆ ಈ ಪ್ರತ್ಯಕ್ಷ ನಿದರ್ಶನದ ಮುಂದೆ ಯಾವ ಸಂಶಯವೂ ನಿಲ್ಲಲಾರದು.

ನಮ್ಮ ವೇದಪುರಾಣಗಳಲ್ಲಿಯೂ, ಮತ್ತಿತರ ಬಂಧವಾದ ಗ್ರಂಥಗಳಲ್ಲಿಯೂ, ಸತ್ತವರು ಇದ್ದೇ ಇರುವರೆಂಬ ತತ್ವವೇನೋ ಹೇಳಲ್ಪಟ್ಟಿದೆ. ಆದರೆ ಅವು ವೈಕುಂಠಕ್ಕೆ ಹೋಗುತ್ತಾರೆಂದು, ಇನ್ನು ಕೆಲವು ಗ್ರಂಥಗಳಲ್ಲಿ ಕೈಲಾಸಕ್ಕೆ ಹೋಗುತ್ತಾರೆಂದೂ ಹೇಳಲ್ಪಟ್ಟಿದೆ. ಅವರವರ ಮತಾನುಸಾರವಾಗಿ, ಒಂದೊಂದು ಸ್ಥಿತಿಯನ್ನು ಕಲ್ಪಿಸಿ, ಸತ್ತವರು ಆಸ್ಥಿತಿಯಲ್ಲಿರುತ್ತಾರೆಂದು ಹೇಳುತ್ತಾರೆ. ಅಂತೂ ಇವೆಲ್ಲವೂ ಕೇವಲ ಕಲ್ಪನೆಗಳಿಂದ ನಾವು ತಿಳಿಯಬೇಕು. ಏಷ್ಟೇ ಆದೋಷ ತತ್ವವಾದರೂ ಪ್ರತ್ಯಕ್ಷ ನಿದರ್ಶನವಿಲ್ಲದಿದ್ದರೆ, ಆ ತತ್ವವನ್ನು ಪ್ರತಿಯೊಬ್ಬರೂ ಸಾರ್ವಜನಿಕವಾಗಿ ನಂಬುವುದಕ್ಕಾಗುವುದಿಲ್ಲ. ಆದರೆ ಜೀವಶಾಸ್ತ್ರದ ತತ್ವಗಳು ಇರುವ ವಾಸ್ತವವಾದ ವಿಚಾರಗಳ ವರ್ಣನೆಗಳೇ ಹೊರತು ಯಾವ ವ್ಯಕ್ತಿಯ ಕೋವಿನ ಪರವಾದ ವಾದಗಳಲ್ಲ. ಮುಖ್ಯವಾಗಿ, ಪ್ರಸಿದ್ಧ ಶಾಸ್ತ್ರಜ್ಞರು, ಜೀವಶಾಸ್ತ್ರ ಮಾರ್ಗಗಳನ್ನನುಸರಿಸಿ, ಅವುಗಳಲ್ಲಿ ಪ್ರಕಟವಾದ ನಿಜಾಂಶಗಳೇ ಜೀವಶಾಸ್ತ್ರದ ತತ್ವಗಳಾಗಿವೆ. ಸತ್ತವರೊಡನೆ ಸಂಭಾಷಣೆಯನ್ನು ನಡೆಸುವ ಮಾರ್ಗಗಳನ್ನು ಕಂಡು ಹಿಡಿದಿರುವುದು ಜೀವಶಾಸ್ತ್ರದಲ್ಲೇ. ಇನ್ಯಾವ

ನಮ್ಮ ದೇಶದಲ್ಲಿ ಲಕ್ಷಾಂತರ ಸ್ತ್ರೀಯರು ಕ್ಷಯರೋಗಕ್ಕೆ ತುತ್ತಾಗುತ್ತಿದ್ದಾರೆ!

ಕೋಟ್ಯಾಂತರ ಮಹಿಳೆಯರು, ದೇಹಧಾರಢ್ಯವಿಲ್ಲದೆ, ಪೂರ್ಣಾರೋಗ್ಯವಿಲ್ಲದೆ ನಾನಾ ರೋಗಗಳಿಂದ ನರಳುತ್ತಾ ಕೃಶಶರೀರವುಳ್ಳವರಾಗಿದ್ದಾರೆ! ಪಾಶ್ಚಾತ್ಯ ದೇಶಗಳ ಸ್ತ್ರೀಯರು ಹೆಚ್ಚು ದೇಹಧಾರಢ್ಯವುಳ್ಳವರಾಗಿದ್ದಾರೆ ದೇಶದ ಸ್ತ್ರೀಯರ ದೇಹಾರೋಗ್ಯಕ್ಕೆ ದೇಹದಾರಢ್ಯವೇ ಮುಂದಿನ ಜನಾಂಗದ ಅಡಿಗಲ್ಲು. ಇದಕ್ಕೆ ಕಾರಣ—ಗಾಳಿ, ಬೆಳಕುಗಳನ್ನು ಸಾಕಾದಷ್ಟು ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳದೇ ಇರುವುದೇ. ದೇಹಕ್ಕೆ ಶುದ್ಧವಾದ ಗಾಳಿ, ಸೂರ್ಯನ ಬೆಳಕು, ಇವು ಅತ್ಯಾವಶ್ಯಕ. ಇವುಗಳಿಲ್ಲದಿದ್ದರೆ ರೋಗವು ಖಂಡಿತ ಉತ್ತರ ಇಂಡಿಯಾ ದೇಶದಲ್ಲಿ ಪ್ರತಿಯೊಬ್ಬ ಮಹಿಳೆಯೂ ಪ್ರತಿದಿನವೂ ಘಾಳಿಸಂಚಾರ ಮಾಡುವ ಪದ್ಧತಿ ಇದೆ. ಛಳಿಗಾಲದಲ್ಲಿ ಮಂಜುಬೀಳುತ್ತಿರುವಾಗ ಶಾಖವಾದ ಒಟ್ಟಿಗಳನ್ನುಟ್ಟು, ಸಣ್ಣ ಮಕ್ಕಳಾದಿಯಾಗಿ ಮನೆಯವರೆಲ್ಲರೂ ಸೂರ್ಯೋದಯಕ್ಕೆ ಮುಂಚೆಯೇ ಹೊರಗೆ ಹೊರಟು ಮೈದಾನಗಳಲ್ಲಿಯೂ ಸಣ್ಣಪುಟ್ಟ ಬೆಟ್ಟಗುಡ್ಡಗಳಲ್ಲಿಯೂ. ತಿರುಗಾಡಿಕೊಂಡು ಬರುತ್ತಾರೆ ಇದರಿಂದ ವ್ಯಾಯಾಮವೂ ಆಗುತ್ತದೆ. ದೇವರು ಕೊಟ್ಟಿರುವ, ಶುದ್ಧವಾದ ಗಾಳಿ, ಆಹ್ಲಾದಕರವಾದ ಸೂರ್ಯರಶ್ಮಿ ಇವುಗಳ ಅದ್ಭುತವಾದ ಪ್ರಯೋಜನವನ್ನು ಹೊಂದಿದಂತಾಗುವುದು. ನಮ್ಮ ಮೈಸೂರು ಸೀಮೆಯಲ್ಲಾದರೋ, ಹೆಂಗಸರು ಹೊರಗೆ ಹೊರಡುವುದೇ ಅತಿವಿರಳ ಹಬ್ಬಹುಣ್ಣಿಮೆಗಳಲ್ಲಿ ದೇವಸ್ಥಾನಗಳಿಗೆ ಹೋಗುತ್ತಾರೆ. ಅಲ್ಲಿ ವಿಪರೀತ ಗಲಾಟೆ, ಜನಸಂದಣಿಯಲ್ಲಿ ನುಗ್ಗಿಬರುತ್ತಾರೆ ಯಾವ ಪ್ರಯೋಜನವೂ ಆಗುವುದಿಲ್ಲ ನಮ್ಮ ಮೈಸೂರು ಪಟ್ಟಣವು ಮನೋಹರವಾದ ಉದ್ಯಾನವನಗಳ ಪಟ್ಟಣವೆಂದು ಹೆಸರುವಾಸಿಯಾಗಿದೆ ಆ ಉದ್ಯಾನವನಗಳ ಪ್ರಯೋಜನವನ್ನು ಯಾರೂ ಹೊಂದುತ್ತಾ ಇಲ್ಲ ಬೆಳಗಿನಹೊತ್ತೇ ಗಾಳಿಸಂಚಾರಕ್ಕೆ ಶ್ರೇಷ್ಠವಾದ ಕಾಲ. ಆದರೆ ಬೆಳಗಿನಝಾವದಲ್ಲಿ ರಸ್ತೆಗಳಲ್ಲಿ ನೋಡಿದರೆ ಯಾರೂ ಇರುವುದಿಲ್ಲ ಪ್ರತಿದಿನವೂ ದೇವಸ್ಥಾನಗಳಿಗೆ ಬೆಳಗಿನಝಾವದಲ್ಲಿ ಹೋಗಿಬರುವುದೆಂದರೆ, ಅವುಗಳಲ್ಲಿಯೂ ೯—೧೦ ಗಂಟೆಗಳವೇಳೆ ಪೂಜಾಕಾಲಗಳು ನಿಧಾನವಾಗಿಬಂದು ತೆರೆಯುತ್ತಾರೆ. ಈ ದೇವಸ್ಥಾನಗಳು ಬೆಳಿಗ್ಗೆ ೬ ಗಂಟೆಗೇ ತೆರೆಯುವಂತೆ ಮಾಡುವುದು ಅತ್ಯಾವಶ್ಯಕವಾಗಿದೆ. ಇದಲ್ಲದೆ, ಪ್ರತಿದಿನವೂ ಬಡವರು, ಹಣವಂತರೆಂಬ ಭೇದವಿಲ್ಲದೆ, ಮನೆಯವರೆಲ್ಲರೂ ಬೆಳಗಿನಝಾವದಲ್ಲಿ

ಶಾಸ್ತ್ರ ಪುರಾಣಗಳಲ್ಲಿಯೂ ಈ ಮಾರ್ಗಗಳು ವರ್ಣಿಸಲ್ಪಟ್ಟಿಲ್ಲ. ಸತ್ತವರೊಡನೆ ಮಾತನಾಡುವುದು ಸಾಧ್ಯವಾದಮೇಲೆ, ಈ ಅಂಶದಿಂದ ನಮ್ಮ ಮನೋ ಪ್ರಪಂಚದಲ್ಲಿಯೂ, ಸಾಮಾನ್ಯ ವ್ಯವಹಾರಂಗಳಲ್ಲಿಯೂ ಉಂಟಾಗುವ ಪರಿಣಾಮಗಳು ಅಪೂರ್ವವಾದುವು. [ಮುಂದುವರಿಯುವುದು.

ಗುಲಿನ್ತಾನ್

(ಕಾಪಿರೈಟ್)

ರಾಜನೀತಿ

೧೬

ನಾನು ನನ್ನಲ್ಲೇ ತಿಳಿದುಕೊಂಡೆನು, "ಅವನ ಮನಸ್ಸು ಅಲ್ಲೋಲಕಲ್ಲೋಲವಾಗಿದೆ; ನಾನು ಹೇಳಿದ ಬುದ್ಧಿವಾದವನ್ನು ಬೇಸರದಿಂದಕೇಳುತ್ತಿದ್ದನೆ" ಎಂದು ಅ ದ ಕೊಂಡೆನು. ಅ ಂತರದಲ್ಲಿ, ನನ್ನ ಪೂರ್ವ ಪರಿಚಿತನಾದ ರಾಜ್ಯದ ಕೋಶಾಧ್ಯಕ್ಷನನ್ನು ಕರೆಯಿಸಿ, ನನ್ನ ಸೇಹಿತನ ವಿಷಯವನ್ನೂ, ಅತನ ಒದ್ದಿ ಚಾತುರ್ಯವನ್ನೂ, ಮತ್ತು ಯೋಗ್ಯತೆಯನ್ನೂ ಕೂಲಂಕುಷವಾಗಿ ತಿಳಿಸಿದನು. ಆಗ ನನ್ನ ಸ್ನೇಹಿತನಿಗೆ ಒಂದು ಸಣ್ಣ ನೌಕರಿಯು ಕೊಡಲ್ಪಟ್ಟಿತು ಕೆಲಕಾಲ ಕಳೆದ ಬಳಿಕ ನನ್ನ ಮಿತ್ರನ ಸದ್ಗುಣಗಳೂ, ದಯಾಶೀಲತ್ವವೂ, ಮತ್ತು ಒಳ್ಳೆಯ ಆಡಳಿತವೂ ಪ್ರಕಾಶಿಸುತ್ತ ಬರಲು, ದಿನೇ ದಿನೇ ದೊಡ್ಡ ದೊಡ್ಡ ಪದವಿಗೆ ಏರಿಸಲ್ಪಟ್ಟನು. ಈರೀತಿ ಅವನ ಅದೃಷ್ಟ ನಕ್ಷತ್ರವು ಮೇಲ ಮೇಲಕ್ಕೇರುತ್ತ ಅಶೆಯು ಅತ್ಯುನ್ನತಸ್ಥಾನಕ್ಕೆ ಸೇರಿತು. ಅವನು ದೊರೆಯ ಅಚ್ಚುಮೆಚ್ಚಿನ ಗೆಳೆಯನಾದನು—ಎಲ್ಲರೂ ಅವರ ಬುದ್ಧಿಯನ್ನಪೇಕ್ಷಿಸಲು ಆರಂಭಿಸಿದರು. ಎಲ್ಲರೂ ತನ್ನ ಆಶಾಕುರಗಳು ಅವನಿಂದ ಪರಿಪಕ್ವವಾಗುವೆಂದು ಭಾವಿಸಿದರು. ಅತನ ಸ್ಥಿತಿಯು ಇಷ್ಟು ಉತ್ಕರ್ಷವಾದುದಕ್ಕೆ ಸಂತೋಷ ಪಟ್ಟು, ಅವನನ್ನು ಕರೆತಂ "ನಿನ್ನ ಹಿಂದಿನ ಕಡು ದಾರಿದ್ರ್ಯದ ವಿಷಯವನ್ನು ಕುರಿತು ಚಿಂತಿಸ ಬೇಡ; ಮತ್ತೆ ಎದೆಗೆಡದಿರು: ಏಕೆಂದರೆ, ಅಮರ ತ್ವದ ಬೆಲುಮೆಗೆ ವಿಪ್ಲವಾವಸ್ಥೆಯಲ್ಲಿಯೇ ಉತ್ಪತ್ತಿ ಸ್ಥಾನವಿರುವುದು. ಎಚ್ಚರದಿಂದಿರು, ವಾತಕ್ಕೆ ಸಿಲುಕಿರುವ ಸಹೋದರನೇ! ಹತಾಶನಾಗಬೇಡ. ಅಗೋ ಚರವಾದ ದಯಾಕಿರಣಗಳು ಭಗವಂತನಲ್ಲಿ ಅಸಂಖ್ಯಾತವಾಗಿವೆ—ಕಾಲಪರಿವರ್ತನೆಗೆ ವಿಷಾದಪಡುತ್ತಾ ಕೂರಬೇಡ; ಏಕೆಂದರೆ, ತಾಳ್ಮೆಯು ದಾರುಣವಾದುದರಿಂದ ಅದರ ಫಲವು ಸವಿಯಾದುದು" ಎಂದು ಹೇಳಿದೆನು.

ಆದೇ ಸಮಯದಲ್ಲಿ ನಾನು ನನ್ನ ಇತರ ಗೆಳೆಯರೊಂದಿಗೆ ಹಿಜಾಜಿಗೆ ಪ್ರಯಾಣ ಮಾಡಿದೆನು. ಮೆಕ್ಕಾ ಯಾತ್ರೆಯಿಂದ ನಾನು ಹಿಂತಿರುಗಿ ಬಂದಾಗ, ಅವನು ಎರಡು ಮಜಲು ಮುಂದಾಗಿ ನನ್ನನ್ನು ಎದುರುಗೊಳ್ಳಲು ಬಂದನು ಅವನು ಸಾಧುವಿನ ವಸನವನ್ನು ಧರಿಸಿದ್ದನು ಮತ್ತು ಅತನ ಬಾಹ್ಯಾವಸ್ಥೆಯು ಬಹು ಹೀನವಾಗಿದ್ದಿತು. ಇದೇನೆಂದು ನಾನು ಪ್ರಶ್ನಿಸಿದೆನು. ಆಗ ಅವನು "ನೀನು ಹೇಳಿದಂತೆಯೇ ಆಯಿತು; ಒಂದು ಮುಗಿಡದ ಜನರ ನಗಲ್ಲಿ ಮಾತ್ಸರ್ಯವನ್ನು ಸಾಧಿಸಿ, ನನ್ನ ಮೇಲೆ ದುಷ್ಕೃತ್ಯದ ಆರೋಪಣೆಯನ್ನು ಹೊರಿಸಿದರು.—ಮಹಾಪ್ರಭುವು ಅತನ ಆಳ್ವಿಕೆಯು ಸ್ಥಿರವಾಗಿರಲಿ!—ನಿಜಾಂಶವನ್ನು ಪರಿಶೀಲಿಸಲೊಲ್ಲನು. ನನ್ನ ಸ್ನೇಹಿತೋತ್ಕರ್ಷವನ್ನು ಕಂಡಿದ್ದವರೆಲ್ಲರೂ ತಮ್ಮ ಹಳೇ ಸ್ನೇಹವನ್ನು ಉದಾಸೀನದಿಂದ ತೋಡಿ, ನನ್ನ ರಕ್ಷಣೆಗೆ ಬಾರದೇ ದೂರ ನಿಂತರು—ದೈವೇಚ್ಛೆಯಿಂದ ನಾನವನು ಪದಭ್ರಷ್ಟನಾದರೆ ಪ್ರಪಂಚವೆಲ್ಲವೂ ಅತನನ್ನು ಪದಚ್ಯುತ ಮಾಡಿಕೊಂಡು ಮುಂದುವರಿಯುವುದು ಅದರೆ ದೈವ ಕೃಪೆಯಿಂದ ಅದೃಷ್ಟವು ಅವನ ಕೈಪಿಡಿದರೆ ಜನವು ತಮ್ಮ ಎದೆಕಟ್ಟಿ ಅತನನ್ನು ಗಟ್ಟಿಯಾಗಿ ಹೊಗಳುವರು—ಸಂಕ್ಷೇಪವಾಗಿ ಹೇಳುವುದೆಂದರೆ, ಈ ವಾರದ ಅರ್ಧಂತ ನಾನು ಎಲ್ಲಾ ವಿಧದ ಹಿಂಸೆಗಳನ್ನು ಅನುಭವಿಸಿದೆನು. ಯಾತ್ರಾರ್ಥಿ ಗಳು ಸುರಕ್ಷಿತವಾಗಿ ಹಿಂತಿರುಗಿದರೆಂದು ಕೇಳಿದಮೇಲೆ ನನ್ನ ಪಿತ್ರಾರ್ಜಿತವಾದ ವನೆಯನ್ನು ಸರ್ಕಾರಕ್ಕೆ ಸೇರಿಸಿಕೊಂಡನಂತರ ನಾನು ಬಿಡುಗಡೆಮಾಡಲ್ಪಟ್ಟೆನು" ಎಂದು ಹೇಳಿದನು. ಅದನ್ನು ಕೇಳಿ ನಾನು "ರಾಜಸೇವೆಯೆಂಬುದು ಸಮುದ್ರಯಾನದಂತೆ ಲಾಭಕರವಾದರೂ ತುಂಬಾ ಅಪಾಯಕರವಾದುದೆಂದೂ ದೊರೆತರೆ ಸಂಪತ್ತು ಇಲ್ಲವೇ ಸಿಕ್ಕಿಪ್ಪ ವಿಪತ್ತೆಂದೂ ನಾನು ಹೇಳಿದ ಬುದ್ಧಿವಾದವನ್ನು ನೀನು ಕೇಳಲಿಲ್ಲ—ಸಮುದ್ರದಲ್ಲಿ ಸಂಚರಿಸುವ ವ್ಯಾಪಾರಿಗಾರನು ಎರಡು ಕೈಗಳ ತುಂಬ ಹಣದೊಂದಿಗೆ ದಡವನ್ನು ಸೇರುವನು ಅಥವಾ ಒಂದಾನೊಂದು ದಿವಸ ಅಲೆಗಳಿಗೆ ತತ್ತಾಗಿ ಅವರ ಶವವೂ ದೊರೆದನೇಲೆ ಬಿಸಾಡ್ಪಡುವುದು. ನಿಷ್ಠುರವಾದ ಬೈಗುಳದಿಂದ ಅ ಡಪಾಣಿಯ ಮನಸ್ಸನ್ನು ತಿರಣಶಬ್ದಗಳಿಂದ ನೋಯಿಸುವುದೂ ಅಥವಾ ಅವನ ಮನಸ್ಸಿನ ಗಾಯಗಳ ಮೇಲೆ ಉಪ್ಪೆಚಿದುತೆ ಮಾಡುವುದು ಉದಾರ ಸ್ವಭಾವವಲ್ಲವೆಂದು ತಿಳಿದು "ಸಾಧು ಸಜ್ಜನರ ಸದುಪದೇಶವನ್ನು ಕೇಳದಿದ್ದರೆ, ಬಂಧನಕ್ಕೆ ಸಿಲುಕಿ ವೆಯೆಂಬುದನ್ನರಿತಿರಲಿಲ್ಲವೇ? ಜೇಳು ಕುಟುಕಿದರೆ ಅದರ ನೋವನ್ನು ಸಹಿಸುವಶಕ್ತಿ ಜೇಳಿನ ಬಿಲದಲ್ಲಿ ಕೈಹಾಕಬೇಡ" ಎಂದು ಹೇಳಿದನು.

ಉದ್ಯಾನವನಗಳ ಮಾರ್ಗವಾಗಿ ಹೊರಟು ದೇವ ಸ್ಥಾನಗಳಲ್ಲಿ ಬೇಕಾದರೆ ಪೂಜೆಮಾಡಿಸಿಕೊಂಡು ಬರುವ ಪದ್ಧತಿಯನ್ನು ಪ್ರಾರಂಭಿಸಬೇಕು. ನಮಗೆ ಪ್ರತಿದಿನವೂ ಆಹಾರವೂ ನೀರೂ ಹೇಗೆ ಅವಶ್ಯಕವೋ ಹಾಗೆಯೇ ಶುದ್ಧವಾದ ಗಾಳಿಯೂ ಬೆಳಕೂ ಅವಶ್ಯಕವೆಂಬುದನ್ನು ಮರೆಯಬಾರದು. ಪ್ರಕೃತ ಈಗಿರುವ ಸ್ಥಿತಿಯು ಅತೃಪ್ತಿಕರವಾಗಿದೆ. ನಮ್ಮ ಮಹಿಳೆಯರ ಆರೋಗ್ಯವನ್ನು ಪರೀಕ್ಷಿಸುದೇ ಆದರೆ ಮುಕ್ಕಾಲು ಪಾಲು ಕ್ಷಯರೋಗವು ಪ್ರಾರಂಭದ ಸ್ಥಿತಿಯಲ್ಲಿರುವುದು ವ್ಯಕ್ತವಾಗುವುದ. ಇನ್ನೂ ಇತರ ನಾನಾ ರೋಗಗಳು ಕಾಣಿಸುವುವು. ಇಂತಹ ಮಹಿಳೆಯರ ಮಕ್ಕಳೂ ಕ್ಷಿಣದೇಹವುಳ್ಳವರಾಗಿ, ಮುಂದಿನ ಜನಾಂಗದ ಎಳಿಗೆಗೆ ಕುಂದಕವಾಗಿರುತ್ತಾರೆ ಮುಖ್ಯವಾಗಿ ಆರೋಗ್ಯ ಇಲಾಖೆಯವರು ಈ ವಿಚಾರಗಳನ್ನು ಪರಿಶೋಧಿಸಿ ಜನಸಾಮಾನ್ಯಕ್ಕೆ ಗಾಳಿ ಸಂಚಾರದ ಅವಶ್ಯಕತೆಯನ್ನು ಮನಗಾಣಿಸಬೇಕು. ಮಹಾಜನರೂ ಕೂಡ ಬೆಳಗಿನಝಾವದಲ್ಲಿ ತಮ್ಮ ಮನೆಯವರೆಲ್ಲರೂ ಹೊರಗೆ ಗಾಳಿಸಂಚಾರ ಹೊರಡುವ ಪದ್ಧತಿಯನ್ನ ತಕ್ಷಣವೇ ಪ್ರಾರಂಭಿಸಬೇಕು. ಇಲ್ಲದಿದ್ದರೆ ಮುಂದಿನ ನಮ್ಮ ದೇಶದ ಎಳಿಗೆಯನ್ನೇ ಅಡ್ಡಿಪಡಿಸಿದ ಮಹಾಪಾಪಕ್ಕೆ ಗುರಿಯಾಗುತ್ತೇವೆ.

[ಸಶೇಷ.

ವರ್ತಮಾನಗಳು

ಇನ್ನು ಮುಂದೆ ಕೌನ್ಸಿಲ್ ಆಫ್ ಸ್ಟೇಟದ ಜುನಾವಣೆಗೆ ಸ್ತ್ರೀಯರೂ ನಿಲ್ಲಬಹುದೆಂದು ತಾ॥ ೧೩ ರಲ್ಲಿ ಕೂಡಿದ ಕೌನ್ಸಿಲ್ ಆಫ್ ಸ್ಟೇಟ ಅಧೀವೇಶನದಲ್ಲಿ ಗೊತ್ತಾಯಿತು.

ಅಬ್ಸೀನಿಯಾ ಯುದ್ಧದಲ್ಲಿ ಒಂದೇ ಸಮನಾಗಿ ೧೯೦ ತಾಸು ವಿಮಾನ ವಿಹಾರಮಾಡಿ ಪರಾಕ್ರಮವನ್ನು ತೋರಿಸಿದ ಬಗ್ಗೆ ಮಾರ್ಶಲ್ ಬಡೊಗ್ಲಿಯೇರವರು ಮುಸ್ಸೋಲೀನಿಯರವರ ಪುತ್ರರಿಗೆ ಬೆಳ್ಳಿಯ ಪದಕಗಳನ್ನು ಕೊಟ್ಟರು.

ಲಾಹೋರಿನಲ್ಲಿ ತಾ॥ ೬ ರಲ್ಲಿ ಸಿ. ಐ. ಡಿ, ಆಫೀಸರರು ಸಣ್ಣ ಹುಡುಗಿಯರನ್ನು ಹಿಡಿದುಕೊಂಡು ಹೋಗುವ ಒಂದು ಗುಂಪನ್ನು ಹಿಡಿದು ಅವರಲ್ಲಿ ೨೫ ಜನ ಪುರುಷರೂ ೧೦-೧೨ ಜನ ಸ್ತ್ರೀಯರೂ ಇರುವರು ಈ ಗುಂಪಿನವರು ಹಿಡಿದುಕೊಂಡಿದ್ದ ೧೦೦ ಸಣ್ಣ ಹುಡುಗಿಯರನ್ನು ಪೊಲೀಸಿನವರು ಶೋಧಿಸಿ ಹಿಡಿದುಕೊಂಡಿದ್ದಾರೆ.

ಬರದ್ವಾನದಿಂದ ೩ ಮೈಲುಗಳ ಮೇಲೆ ನಿವಾಘಾಟು ಎಂಬ ನಗರದಲ್ಲಿ ಒರದ್ವಾನ ಮಹಾರಾಜರ ೧೦೮ ಶಿವಾಲಯಗಳಲ್ಲಿ ೫೦ ಶಿವಾಲಯಗಳನ್ನು ತಾ॥ ೧೫ ರ ರಾತ್ರಿ ಯಾರೋ ಅಜ್ಞಾನಿಗಳು ಭ್ರಷ್ಟ ಮಾಡಿರುವರೆಂದೂ ಮತ್ತು ಕೆಲವು ದೇವಾಲಯಗಳಲ್ಲಿ ಶಿವಲಿಂಗಗಳನ್ನು ಸ್ನಾನಭ್ರಷ್ಟ ಮಾಡಿರುವರೆಂದೂ ತಿಳಿದುಬಂದಿದೆ.

ಆಫ್ರಿಕೆಯ ಮಿ॥ ಅಲ್ಲಿಬಾಯಿ ಎಂಬ ೨೬ ವರ್ಷದ ಕರುಣನು ಸೈಕಲ್ಲಿನ ಮೇಲೆ ಜಗತ್ಪರ್ಯಟನಕ್ಕೆ ಹೊರಟಿದ್ದು ಅತನು ತಾ॥ ೧೩ ರಲ್ಲಿ ಇಲ್ಲಿಗೆ ಬಂದಿದ್ದನು. ಈವರೆಗೆ ಅತನು ಟಾಂಗಾನಿಕಾ, ಕೆನಿಯಾ ಪೋರ್ತುಗೀಜ, ಅಕ್ಷಿಣ ಆಫ್ರಿಕ, ಸಿಲೋನ್, ಬ್ರಹ್ಮ ದೇಶ, ಚೀನ, ಜಪಾನ್ ದೇಶಗಳಲ್ಲಿ ಪ್ರವಾಸಮಾಡಿದ್ದು, ಪ್ರವಾಸದಲ್ಲಿಯ ವಿಶೇಷ ಮಾಹಿತಿಯ ಬಗ್ಗೆ ಗ್ರಂಥವನ್ನು ಬರೆಯುವದು ಅವನ ಇಚ್ಛೆ ಇದೆ. ಅದರಂತೆ ಸುಗ್ರಹವನ್ನು ಸಹ ಮಾಡಿರುವದು.

ಪರೆ॥ ಪಾಲ್ಲಿಯವರು ನಾಶಿಕದಲ್ಲಿ ತಾ॥ ೧೭ ರಲ್ಲಿ ಮಾಡಿದ ಭಾಷಣದಲ್ಲಿ ಕೆಳಗಿನಂತೆ ನಿರ್ಧಾರ ಮಾಡಿರುವರು—"ರಾಮಮಂದಿರದಲ್ಲಿ ಹರಿಜನರಿಗೆ ಪ್ರವೇಶ. ರಾಮರಥ ವೆಂಬಣಿಗೆಯಲ್ಲಿ ಭಾಗತೆಗೆದುಕೊಳ್ಳುವ ವರವಾಸಿಗೆ ಹಾಗು ರಾಮ ಕುಂಡದಲ್ಲಿ ಸ್ನಾನಮಾಡುವ ಅಧಿಕಾರ, ಇವು ಹರಿಜನರಿಗೆ ಸಾಧ್ಯವಾಗುವವರೆಗೆ ನಾನು ಯಾವಾಗಲೂ ಇಲ್ಲಿಗೆ ಒಂದು ಪ್ರಯತ್ನವನ್ನು ಮಾಡಲಾರೆನೆ.

ವಂಡಿನ ಚಳಿಗಾಲದಲ್ಲಿ ಲಾರ್ಡ್ ಎಡ್ವರ್ಡ್ ರವರು ಹಿಂದುಸ್ಥಾನಕ್ಕೆ ಬರುವರು, ಆಗ್ಗೆ ಎಲ್ಲಾ ಕಡೆಗೂ ಅವರ ಸ್ವಾಗತವಾಗಬೇಕೆಂದೂ ಹಾಗೂ ೧೯೩೧ ನೇ ಇಸವಿಯಲ್ಲಿ ಅವರು ಒಂದಾಗ್ಗೆ ಅದ ಒಹಿಷ್ಕಾರದ ಪುನರಾವೃತ್ತಿಯಾಗಬಾರದೆಂದು ಹಿಂದುಸ್ಥಾನದ ಹೊಸ ವೈಸ್ರಾಯರಾದ ಲಾರ್ಡ್ ಲಿನ್‌ಲಿತ್‌ಗೋ ಇವರ ಹಿಂದುಸ್ಥಾನಕ್ಕೆ ಒಂದವೇಲೆ ಅಸಂ ಗಾಂಧಿಜಿಯವರಿಗೆ ಭೆಟಿಯಾಗಿ ಈ ವಿಷಯವಾಗಿ ಪ್ರೇಮಪೂರ್ವಕ ಚರ್ಚೆ ಮಾಡುವರೆಂದೂ ಅದರಂತೆ ಗಾಂಧಿಜಿಯವರಿಗೆ ತಿಳಿಸಲಾಗಿದೆಯೆಂದೂ ಯುನಾಯಿಟೆಡ್ ಪ್ರೆಸ್ಸಿನ ಲಂಡನ್ನಿನ ಸುದ್ದಿಗಾರನು ತಿಳಿಸಿರುವನು.

ಸತ್ಯವಾದಿ

ನಮ್ಮ ಪ್ರಾರ್ಥನೆ

೧ ಧಾತೃಸಂವತ್ಸರವು ಶುಭಫಲವ ಕೊಡಲಿ |
ಜನರೆಲ್ಲ ಆನಂದ ಸುಖದಿಂದ ಬಾಳಲಿ ||

೨ ಮಿತವಾಗಿ ಮಳೆಬಂದು ಅಮಿತ ಬೆಳೆ ಬೆಳೆಯಲಿ |
ವ್ಯವಸಾಯ ಉದ್ಯೋಗದಲಿ ಲಾಭ ಬರಲಿ ||

೩ ರೋಗಭಾಧೆಗಳೊಂದು ಇಲ್ಲದೆಯೆ ಜನರೆಲ್ಲ |
ಆರೋಗ್ಯಯುತರಾಗಿ ಸುಖವಾಗಿ ಬಾಳಲಿ ||

೪ ರವಿಯಾಯುರಾರೋಗ್ಯಭಾಗ್ಯಗಳ ಕೊಡಲಿ |
ಚಿಂದಿರನು ಸದ್ಯಶಶ್ಚಂದ್ರಿಕೆಯ ಬೆಳಗಲಿ ||

೫ ಮಂಗಳನು ಸಕಲಸನ್ಮಂಗಳಪ್ರದನಾಗಿ |
ಬುಧನು ಸದ್ಬುಣಬುದ್ಧಿಗಳ ಕೊಟ್ಟು ಸಲಹಲಿ ||

೬ ಗುರುವು ಸುಜ್ಞಾನಸುವಿಚಾರಗಳನೀಯಲಿ |
ಭಾರ್ಗವನು ಧನಕನಕವಾಹನವನಿ ಯಲಿ ||

೭ ಶನಿಯು ಸುಸ್ಥಿರವಾದ ಚಿತ್ತವನು ಧೈರ್ಯವನು |
ಸಕಲಸೌಖ್ಯೈಶ್ವರ್ಯಗತಿನಿತ್ಯ ಪಾಲಿಸಲಿ ||

೮ ತಾರೆ ಇಪ್ಪತ್ತೇಳು ಹನ್ನೆರಡು ಮಾಸಗಳು |
ಷಡೃತುಗಳಯನಯುಗ್ಮವು ಪಕ್ಷವೆರಡು ||

೯ ದೇಹದಲಿ ಶಕ್ತಿಯನು ದೇವರಲಿ ಭಕ್ತಿಯನು |
ಜನರೊಳಗೆ ಐಕ್ಯವನು ಪ್ರೀತಿಯನು ಕೊಡಲಿ ||

೧೦ ಕರ್ನಾಟಕದೇಶದೊಡೆಯರು ನಮ್ಮ ಮೈಸೂರ |
ಯದುವಂಶಜರಾಜರು ಧರೆಯೊಳಗೆ ಮೆರೆಯಲಿ ||

ಜಪಾನಿನ ವೈದ್ಯನಿಕನೊಬ್ಬನು ಬಂದು ಇಂಜಕ್ಷನ್ನನ್ನು ಕಂಡುಹಿಡಿದನು. ಇದನ್ನು ಕೊಟ್ಟರೆ ಎಂತಹ ಹೇಡಿಯಾದರೂ ಧೈರ್ಯಶಾಲಿಯಾಗುವನು.

ನೊಹರಂ ಹಬ್ಬದ ಕಾಲಕ್ಕೆ ಇರಾಕ್ ಯಾತ್ರೆಗೆ ಹೋಗಲು ಹಿಂದೂ ಮಸಲ್ಮಾನರಿಗೆ ಇರಾಕ್ ಸರಕಾರದವರು ಅಲ್ಲಿಗೆ ಹೋಗದಂತೆ ತಡೆಯುತ್ತಾರೆಂದು ತಿಳಿಯಬಂದಿದೆ.

ಜೋಧಪುರದ ಮಹಾರಾಜರು ವ್ಯವಸಾಯಗಾರರ ಸಹಾಯಾರ್ಥವಾಗಿ ೧ ಲಕ್ಷ ರೂಪಾಯಿಗಳ ತೆರಿಗೆಯನ್ನು ಕಡಿವೆ ಮಾಡಿಸಿರುವರು. ಅಲ್ಲದೆ ೩೨ ಸಾವಿರ ರೂಪಾಯಿ ಸೆಸ್ಸನ್ನೂ ಬಿಟ್ಟುಕೊಟ್ಟಿರುವರು.

ಪುನರ್ಜನ್ಮವನ್ನು ಪ್ರತ್ಯಕ್ಷಗೊಳಿಸಲು ಮತ್ತೊಂದು ಹುಡುಗಿಯು ಮುಂದಾಗಿ ಬಂದಿದೆ. ಅದೂ ಶಾಂತಾದೇವಿಯಂತೆ, ತನ್ನ ಹಿಂದಿನ ಕತೆಯನ್ನೆಲ್ಲಾ ತಿಳಿಸಿ ಹಿಂದಿನ ತನ್ನ ಮನೆಗೆ ಹೋಗಬೇಕೆಂದು ಹಟಮಾಡುತ್ತಿದೆ. ತನ್ನ ಪೂರ್ವಜನ್ಮದ ಮಕ್ಕಳನ್ನು ಗುರ್ತಿಸಿದೆ.

ವಿವಿಧ ವಿಷಯಗಳು

ಅನೇಕಕಾದಲ್ಲಿ ಕಪ್ಪೆ ಕಾಲುಗಳನ್ನು ತಿನ್ನಲು ಪ್ರಾರಂಭಿಸಿರುವದರಿಂದ. ಒಂದೊಂದು ಕಪ್ಪೆಗೆ ೨ ರೂ ಪಾಯಿ ಖರೀದಿ ಆಗುತ್ತಿದೆಯಂತೆ!

ಇಟಲಿಯಲ್ಲಿ ಮದ್ದುವೆಯಾಗದಿರುವ ೨೫ ವರ್ಷಕ್ಕೆ ಮೇಲ್ಪಟ್ಟು ೫೦ ವರ್ಷದವರಿಗಿನವರು ವರ್ಷಕ್ಕೆ ೨ ಪೌಂಡುಗಳ ತೆರಿಗೆ ಕೊಡಬೇಕೆಂದು ನಿರ್ಣಯ.

ಜಿನೀವಾ ನಾನಾ ಸಮಿತಿಯು ನಿರ್ಮಿಸಿದ ತ ವಿಟಿ ತೀರ್ಮಾನವನ್ನನುಸರಿಸಿ, ಅಬ್ಸೀನಿಯಾವು ಕೆಲವು ಕಾಲದವರೆಗೆ ಯುದ್ಧವನ್ನು ನಿಲ್ಲಿಸಲು ಒಪ್ಪಿಕೊಂಡಿತಾದರೂ, ಇಟಲಿಯು ಮಾತ್ರ ವಿಮಾನಗಳಿಂದ ಬಾಂಬುಗಳನ್ನು ಎಸೆಯುವ ಕೆಲಸವನ್ನು ನಿಲ್ಲಿಸಲ್ಲಿಲ್ಲವೆಂದು ತಿಳಿಯಬರುತ್ತದೆ.

ಇರಾಕಿನಲ್ಲಿ ಇನ್ನುಮುಂದೆ ಭಾರತೀಯರು ಸ್ವೇಚ್ಛೆಯಾಗಿ ನಿವಾಸಮಾಡಲು ನಿರ್ಬಂಧಗಳು ಏರ್ಪಟ್ಟಿರುವೆಂದು ತಿಳಿಯಬಂದಿದೆ. ಕೂಲಿಗಳು ಕೂಡ 100 ರೂಪಾಯಿಗಳನ್ನು ಸಲ್ಲಿಸಿ ಲೈಸನ್ಸ್ ತೆಗೆದುಕೊಳ್ಳಬೇಕೆಂದು ಶಾಸನಮಾಡಿರುವರು. ಭಾರತೀಯರಿಗೆ ಈಜೆಗೆ ಎಲ್ಲಾ ಕಡೆಗಳಲ್ಲಿಯೂ ಕಷ್ಟಗಳು ಪ್ರಾಪ್ತವಾಗುತ್ತಿವೆ.

ಕೆನಡಾ ದೇಶದ ಭಂಗಾರದ ಗಣಿಗಳಲ್ಲಿ 1934 ನೇ ಸಾಲಿನಲ್ಲಿ 102 ಮಿಲಿಯ ಡಾಲರುಗಳ ಭಂಗಾರವು ಆಗೆಯಲ್ಪಟ್ಟಿತು. ಆ ದೇಶದಲ್ಲಿ ಈ ಕೃಷಿಯು ದಿನೇ ದಿನೇ ಅಭಿವೃದ್ಧಿಯಾಗುತ್ತಲಿದೆ.

ಇಟಲಿಗೆ ಯಾವ ದೇಶವಾಗಲೀ ಎಣ್ಣೆಯನ್ನು ಕಳುಹಿಸಕೂಡದೆಂಬ ತೀರ್ಮಾನವನ್ನು ಜಿನೀವಾ ಸಮಿತಿಯು ನಿರ್ಮಾಣಮಾಡಿದ ಕಮಿಟಿಯು ಪ್ರಾಸು ಮಾಡಿತು. ಈ ಕಮಿಟಿಯು, ಅಬ್ಸೀನಿಯಾಕ್ಕೆ ಇತರ ದೇಶಗಳು ದ್ರವ್ಯ ಸಹಾಯವನ್ನು ಮಾಡಬೇಕೆಂದು ಕೂಡ ತೀರ್ಮಾನಮಾಡಿತು.

ಇತರ ದೇಶಗಳಿಂದ ಈಜೆಗೆ ಯುದ್ಧಸಾಮಗ್ರಿಯು ಅಬ್ಸೀನಿಯಾಕ್ಕೆ ರವಾನೆಯಾಗುತ್ತಿದೆ. ಬರ್ಬಾರಾದಿಂದ ಲಾರೀಗಳು, ಮತ್ತು ಗಾಡಿಗಳ ಮೂಲಕ ೨೦೦ ಮೈಲು ದೂರ ಅವನ್ನು ಸಾಗಿಸಬೇಕಾಗಿದೆ.

ಪ್ರಪಂಚದಲ್ಲಿ ಬೆಳೆಯುವ ಮತ್ತು ಲಭಿಸುವ ಯಾವತ್ತು ಪದಾರ್ಥಗಳು ಎಲ್ಲರಿಗೂ ಸಿಗುವಂತೆ ಪೂರ್ತಾ ಅವಕಾಶವಿರಬೇಕೆಂದೂ, ಅಸೂಯೆಯಿಂದ ಕೆಲವು ದೇಶಗಳು ಇದಕ್ಕೆ ಆಟಂಕವನ್ನುಂಟು ಮಾಡಕೂಡದೆಂದೂ ಜರ್ಮನಿ ಮಂತ್ರಿಗಳಾದ ಡಾ || ಗೋಬಿಲ್ಸ್ ರವರು ಲಘ್ಟಿಗ್ ಸಂತೆಯಲ್ಲಿ ಸೂಚಿಸಿದರು.

ರಾಮನಾಥಪುರ ಜಿಲ್ಲೆಯಲ್ಲಿ ಒಬ್ಬ ರೈತನು ಶಿವಕಾಶಿ ಸಮೀಪದಲ್ಲಿಯ ತನ್ನ ಹೊಲವನ್ನು ಉತ್ತು ರಾತ್ರಿಯ ಹೊತ್ತಿಗೆ ಮನೆಗೆ ಬಂದನು. ಬೆಳಿಗ್ಗೆ ಹೊಲಕ್ಕೆ ಹೋದಾಗ ಅದರಲ್ಲಿ ಬ್ರಹ್ಮಾಂಡವಾದ ಗಂಡಿ ಬಿದ್ದಿತ್ತು. ಇದನ್ನು ಕಂಡವರೆಲ್ಲರೂ ಆಶ್ಚರ್ಯಗೊಳ್ಳುತ್ತಿರುವರು.

ನಮ್ಮ ಆಹಾರ ಪದಾರ್ಥಗಳಲ್ಲಿ ಎಣ್ಣೆಯು ವಾತಹರಿಯೆಂದೂ, ತುಪ್ಪವು ಪಿತ್ತಹರಿಯೆಂದೂ, ಜೇನು ತುಪ್ಪವು ಶ್ಲೇಷ್ಮಹರಿಯೆಂದೂ ಲವಣವನ್ನು ಅಧಿಕವಾಗಿ ಸೇವರಿಗೆ ಸಹನಶಕ್ತಿ ಕಡಮೆಯಾಗಿರುವದೆಂದೂ ಆರೋಗ್ಯ ಪ್ರಕಾಶಿಕೆಯಲ್ಲಿ ತಿಳಿಸಿರುತ್ತದೆ.

ಬಹಳಕಾಲ ಕಲ್ಕತ್ತಾದಲ್ಲಿ ಬ್ಯಾರಿಸ್ಟರಾಗಿಯೂ ಹೈ ಕೋರ್ಟು ಜಡ್ಜಿಯರಾಗಿಯೂ ಇದ್ದ ಸರ್ ಜಾರ್ಜ್ ವುಡ್‌ರಾಫ್ ರವರು ನಮ್ಮ ಪ್ರಾಚೀನ ಮಂತ್ರಶಾಸ್ತ್ರ ಗ್ರಂಥಗಳಲ್ಲಿ ಅನೇಕವುಗಳನ್ನು ಪರಿಶೀಲಿಸಿ, ಪ್ರಚುರಪಡಿಸಿ ಸಂಸ್ಕೃತ ಭಾಷೆಯ ಗೌರವವನ್ನು ಇಡೀ ಪ್ರಪಂಚಕ್ಕೆ ಹರಡಿದರು. ಇವರು ಮರಣಹೊಂದಿದ ಕಾರಣದಿಂದ ಬೆಂಗಾಲೀ ಪ್ರಮುಖರು ಇವರ ಕಾರ್ಯವನ್ನು ಮುಂಜರಿಸುವದು ಅತ್ಯವಶ್ಯವಾಗಿರುತ್ತವೆ.

ಇದುವರಿಗೂ ಹೊಸ ವೈಸರಾಯಿಗಳೆಲ್ಲರೂ ಬೊಂಬಾಯಿ ರೇವಿನಲ್ಲಿ ಇಳಿಯುತ್ತಲೇ, ಬೊಂಬಾಯಿ ಯೂನಿವರ್ಸಿಟಿ ಹಾಲಿನಲ್ಲಿ ವೈಸರಾಯಿ ಪದವಿಯನ್ನು ಸ್ವೀಕರಿಸಿದಂತೆ ಪ್ರಮಾಣವನ್ನು ಮಾಡುವ ಆಚಾರವು. ವೈಸರಾಯಿಯರಾಗಿ ಬರುವ ಲಾರ್ಡ್ ಲಿಂಲಿತ್ಗೋರವರು ಈ ಆಚಾರವನ್ನು ತಪ್ಪಿಸುವರಂತೆ. ಇದಕ್ಕಾಗಿ ಬೊಂಬಾಯಿ ಪ್ರಜೆಗಳು ಆಶ್ಚರ್ಯಯುತರಾಗಿರುವರು.

ಇಂಗ್ಲೆಂಡು, ಇಟಲಿ, ಎ ಎರಡೂ ಒಟ್ಟಿಕೊಂಡರಾದರೂ, ಇನ್ನು ಮುಂದೆ ಸುಮ್ಮನಿರಲು ಜರ್ಮನಿಗೆ ಸಾಧ್ಯವಿಲ್ಲವೆಂದೂ, ಹಾಲೆಂಡಿನೊಂದಿಗೆ ಕೂಡ ಸ್ನೇಹದಿಂದಿರಲು ಜರ್ಮನಿಗೆ ಆತಂಕವಿರುವದಿಲ್ಲವೆಂದೂ, ಜರ್ಮನಿಯಿಂದ ಬೇರ್ಪಡಿಸಿದ ಕಾಲೊನಿಗಳನ್ನು ಪುನಃ ಜರ್ಮನಿಯು ಸ್ವಾಧೀನಪಡಿಸಬೇಕೆಂದೂ ಹಿಟ್ಲರವರು ನಿಸ್ಸಂಕೋಚವಾಗಿ ಪ್ರಕಟಿಸಿರುವರು ಮೇಲ್ಕಂಡ ಕೋರಿಕೆಗಳು ಸಫಲವಾಗುವ ಪಕ್ಷದಲ್ಲಿ ಇತರ ದೇಶಗಳೊಂದಿಗೆ ಕೂಡಿ ನಾನಾಜಾತಿ ಸಮಿತಿ ವ್ಯವಹಾರಗಳಲ್ಲಿ ಭಾಗವಹಿಸಲು ಆತಂಕವಿರುವದಿಲ್ಲವೆಂದು ಕೂಡ ತಿಳಿಯಪಡಿಸಿರುವರು.

ಬೊಂಬಾಯಿ ಪಟ್ಟಣದ ವೆಲ್ಕಂ ಹೋಟಲಿನಲ್ಲಿ ೬ ತಿಂಗಳಿಂದ ದಾಕ್ಷಿಣಾತ್ಯ ಗಂಡಹೆಂಡರಿಬ್ಬರು ಒಂದು ಕೋಣೆಯಲ್ಲಿದ್ದರು. ಗಂಡನಹೆಸರು ವಿಮಾನಾಕ್ಷಿಸಂದರು. ಹೆಂಡತಿಯ ಹೆಸರು ಯಾರಿಗೂ ತಿಳಿಯದು. ಫೆಬ್ರವರಿ ೨೯ ನೇ ತಾರೀಖಿನ ದಿವಸ ಬೆಳಿಗ್ಗೆ ೧೦ ಗಂಟೆಗಳವರೆಗೂ ಅವರ ಕೋಣೆಯ ಬಾಗಿಲು ತೆರೆಯಲ್ಪಡಲಿಲ್ಲವೆಂದು ಹೋಟಲ್ ಅಧಿಕಾರಿಯು ಬಾಗಿಲನ್ನು ಒಡಿಸಿ ನೋಡಲಾಗಿ ಗಂಡಹೆಂಡರಿಬ್ಬರೂ ಸತ್ತುಬಿದ್ದಿದ್ದರು. ಕಾರಣವು ತಿಳಿಯಲಿಲ್ಲ. ಕೂಡಲೇ ಪೋಲೀಸಿನವರು ಪರಿಶೋಧನೆ ಮಾಡಲಾಗಿ ಗಂಡಸಿನ ಜೋಬಿನಲ್ಲಿ ಅವರ ಮರಣಕ್ಕೆ ಕಾರಣವನ್ನು ಸೂಚಿಸುವ ಒಂದು ಕಾಗದವು ಕಂಡುಬಂದಿತು. ಆ ಕಾರಣವನ್ನು ಹೊರಪಡಿಸಿಲ್ಲ. ವಿಚಾರಣೆ ನಡೆಯುತ್ತಿದೆ.

Shiromani NARAYANACHARYA
Chowkambha, Benarese.

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯರೇ ಆಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ: ಅದಕ್ಕೆ ಕಾರಣವೇನು ? ಅವರು ರುದ್ರಾಕ್ಷಿಯನ್ನು ಬಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು ? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯ ರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ೫೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರಿಗೆ ; 100 ರುದ್ರಾಕ್ಷಿಗಳುಳ್ಳ ಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ ರೂ 50 ರವರೆಗೆ ; ಮುಖ 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರಿಗೆ ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರೆಗೆ ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರಿಗೆ. ಸಣ್ಣ ರುದ್ರಾಕ್ಷೀ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ನಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ] 1 ಆಣೆ ಸ್ಟಾಂಪು ಕಳುಹಿಸಿದಲೆ 3 ಇನಾಮುಗಳು : 1 ವಿಶ್ವೇಶ್ವರ ಪತ, 1 ಕಾಶೀಸಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ [ಕಾಶಿ.

shanmukhavilas
Coffee Club
Jaganmohan Palace Road
M SORE
— for —
EXCELLENTTIFFIN, & COFFEE

Wanted

Agents with Pay and Allowances to canvass subscribers and advertisers for

Satyavadi

Apply in person or through post to
The Manager,
Satyavadi Office, Satyavadi Buildings,
Chamarajpuram, Mysore.

Mysore Railways

ಮೈಸೂರು ರೈಲ್ವೆಗಳು

ನೋಟೀನು.

ಬರುವ ಈಸ್ಟರ್ ರಜದ ರಿಯಾಯಿತಿ ಗರದ ರಿಟರ್ನ್ ಟಿಕೀಟುಗಳು ಎರಡು ಪ್ರಯಾಣಕ್ಕೂ ೧॥ ಚಾರ್ಜಿನ ಮೇಲೆ ಈ ರೈಲು ಮತ್ತು ದೂರ ಪ್ರಯಾಣಕ್ಕೂ ಎಲ್ಲಾ ತರಗತಿಯ ಪ್ರಯಾಣೀಕರಿಗೂ ಕೊಡಲಾಗುತ್ತದೆ. ಆವರೆ ಮೈಸೂರು ಚಾಮರಾಜನಗರ ಸೆಕ್ಷನ್ನಿನಲ್ಲಿ ಮತ್ತು ನ್ಯಾರೋ ಗೇಜ್ ಸೆಕ್ಷನ್‌ಗಳಲ್ಲಿ ೩ ನೇ ಆಥವ ಕೊನೆ ತರಗತಿಗಳಿಗೆ ಕೊಡಲಾಗುವುದಿಲ್ಲ. ಟಿಕೀಟುಗಳನ್ನು ೧೯೩೬ ನೇ ಇಸವಿ ಏಪ್ರಿಲ್ ೨ ನೇ ತಾರೀಖಿನಿಂದ ೧೩ ನೇ ತಾರೀಖಿನವರೆಗೆ ಯಾವಾಗಬೇಕಾದರೂ ಪಡೆಯಬಹುದು ; ಆದರೆ ವಾಪಸ್ ಪ್ರಯಾಣವು ಆ ತಿಂಗಳ ೨೨ ನೇ ತಾರೀಖಿನ ರಾತ್ರಿ ೧೨ ಘಂಟೆಯೊಳಗೆ ಮುಗಿಸಿರಬೇಕು. ಚಾರ್ಜಿನ ವಿಚಾರಕ್ಕೂ, ಕೊಡುವ ನಿಬಂಧನೆಗಳಿಗೂ ಈ ರೈಲ್ವೆಯ ಯಾವ ಸ್ಟೇಷನ್ ಮಾಸ್ಟರಿಂದಾಗಲೀ ಆಥವ ಕೆಳಗೆ ರುಜುಮಾಡಿರುವರಿಂದಾಗಲೀ ತಿಳಿಯಬಹುದು.

ಟ್ರಾಫಿಕ್ ಮ್ಯಾನೆಜರ್ ಆಫೀಸು ಮೈಸೂರು.
ತಾ॥ ೨—೩—೧೯೩೬.

H. D. SINCLAIR
Traffic Manager

ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವೃಥಾ ಚಿಂತಿಸಬೇಡಿ. ಮುಂದೆ ಒರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ. ನಿಮ್ಮ ಜಾತಕದ ಸಕಲವನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೊ ತಿಳಿಸಿರಿ. ನಿಮಗೆ ಬೇಕಾದ ಐದ ಪ್ರಶ್ನೆಗಳನ್ನು ಕೇಳಿರಿ. ತೃಪ್ತಿಕರವಾಗಿ ಉತ್ತರವನ್ನು ಕಳುಹಿಸುವೆವು ಫೀಜು ಒಬ್ಬರಿಗೆ ೧—೪—೦ ರೂಪಾಯಿ ಮಾತ್ರ

ರಾಜಕ ಜ್ಯೋತಿಷ್ಯರು,
೧೦೬ ಚಾಮುಂಜ ಅಗ್ರಹಾರ, ಮೈಸೂರು

ನೀರಿನಿಂದ!
ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು
ಈಗಲೇ
ಕೊಂಡುಕೊಳ್ಳಿ

H. SASSEN & CO.,
15 Armenian Street, Post Box 163
G. T. MADRAS



ಹಿಟ್ಲರರು ಕೊಟ್ಟರು ಕೆಲಸ !

ರ್ಯಾಲ್ಯಾಂಡಿಗೆ ಸೈನ್ಯವನ್ನು ಕಳುಹಿಸಿ ಹಿಟ್ಲರು ಇಡೀ ಯೂರೋಪನ್ನೇ ತಳಮಳಗೊಳಿಸಿದ್ದಾರೆ; ಆ ರಾಜನೀತಿಯ ಸಮುದ್ರವನ್ನು ಅಲ್ಲೋಲ ಕಲ್ಲೋಲ ಮಾಡಿದ್ದಾರೆ. ಈಗ ಜರ್ಮನಿಯ ಅಕ ಸ್ಮಾತ್ತಾದ ಈ ಎದೆಗಾರಿಕೆಯ ಕಾರ್ಯವನ್ನು ಕಂಡು ಯೂರೋಪಿನ ರಾಷ್ಟ್ರಗಳು ತಡೆಬಿಡುವಿಲ್ಲದೆ, ತಲೆ ತುರಿಸಲೂ ಅವಕಾಶವಿಲ್ಲದೆ, ಬಾಯಿಯಲ್ಲಿ ಅಕ್ಕೀ ಕಾಳು ಹಾಕಿಕೊಂಡು ಅತ್ತಿತ್ತ ಓಡಾಡುತ್ತಿವೆ ಮುಂದೇನೆಂದು. ಅದರಲ್ಲಿಯೂ ಫ್ರಾನ್ಸಿಗೆ ಜಳ ಹಿಡಿದು ಹೋಗಿದೆ. ಬ್ರಿಟನಿಗೆ ಯೋಚನೆಬಂದಿದೆ. ಜರ್ಮನಿ ಆ ಸಂಧಿ ಮುರಿದಿದೆ; ಜರ್ಮನಿಯ ಪರ ತ್ತುಗಳಂತೆ ನಡೆಯಲು ನಮಗೆ ಸಾಧ್ಯವೇಯಿಲ್ಲ ಎಂದು ಫ್ರಾನ್ಸಿನ ಉದ್ಗಾರ. ಫ್ರಾನ್ಸನ್ನು ಎತ್ತಿ ಹಿಡಿದು, ಬ್ರಿಟನೂ ಜರ್ಮನಿಯ ಕಡೆಗೆ ಕಣ್ಣು ಕೆರಳಿಸಿದೆ. ಇದರ ಪರಿಣಾಮ ಫ್ರಾನ್ಸಿನಲ್ಲಿ ವಿಾಟಿಂಗು; ಬ್ರಿಟನಿನಲ್ಲಿ ವಿಾಟಿಂಗು; ವಿ.ವಿಟಿಗೊಂದು. ಅವರಿವರ ಸ್ಟೇಟುಮೆಂಟುಗಳ ಹೊರೆಯೇ ಪತ್ರಿಕೆಗಳಲ್ಲಿ ಪಾಪ! ರಾಷ್ಟ್ರಗಳ ತಾಯಿಯಾದ ಜನತಾಂಗ ಸಂಘಕ್ಕಂತೂ ಈಗ ವಿಪರೀತ ಕೆಲಸ—ಜರೂರಿನ ಮೇಲೆ ಜರೂರ್ ಕೆಲಸ—'ಸ್ಯಾಂಕ್ಷನು' ಗಳಂತೆ ಪುಣ್ಯ ಕಾಲ ಸಂಕಲ್ಪದಲ್ಲಿ ಕಳೆಯಕಕ್ಕುದಲ್ಲ. ಕಾರಣ, ಇದು ಬಿಳಿ ಜನರ 'ಪೊಕದ್ದಮೆ' ಆದರೂ ಅವರು ಹಿಟ್ಲರರು; ಮುಂದಿಟ್ಟ ಕಾಲು ಹಿಂದಿಡುವವರಲ್ಲ; ಸಂಕಲ್ಪಮಾಡಿದುದನ್ನು ಕಾರ್ಯದಿಂದಲೇ ಮಾಡಿ ಮುಗಿಸುವವರು. ಇನ್ನು ಇವರಿವರ ಜಗಳ ಸ್ವಾರಸ್ಯ. ಇದರಲ್ಲಿ ಮುಂದಾಗುವುದೇನೋ ಗೊತ್ತಿಲ್ಲ. ಅಂತೂ ಯುದ್ಧದ ಕಾರ್ಮೋಡಗಳು ಯುರೋಪಿನಲ್ಲಿ ಸುಳಿದಾಟ ಹತ್ತಿವೆ. ಮುಂದಿನ ಪರಿಣಾಮವೇನಾಗುತ್ತದೋ ನೋಡಬೇಕು. [ಕಂ.

ಪೂರ್ವಕಾಲದಲ್ಲಿ ಜೇನುತುಪ್ಪವನ್ನು ಅಧಿಕವಾಗಿ ಹುಣ್ಣುಗಳಿಗೆ ಉಪಯೋಗಿಸುತ್ತಿದ್ದರು. ಆಷ್ಟೇ ಅಲ್ಲದೆ ಔಷಧಿಗಳೆಲ್ಲಕ್ಕೂ ಕೂಡ ಉಪಯೋಗಿಸುತ್ತಿದ್ದರು. ಈಗ ಇದನ್ನು ಕಾಡ್‌ಲಿವರ್ ಆಯಿಲಿನೊಂದಿಗೆ ಬೆರಸಿ ಸೇವಿಸಲಕ್ಕೆ ಕೊಟ್ಟು ಇದರ ಅದ್ಭುತ ಗುಣವನ್ನು ಹರಡುತ್ತಿರುವರು. ಎಣ್ಣೆ, ಜೇನುತುಪ್ಪಗಳನ್ನು ಕಲಿಸಿ ಲೇಪಿಸಿದಲ್ಲಿ ಎಂತಹ ಕೆಟ್ಟ ವ್ರಣವಾದರೂ ಗುಣವಾಗುವದೆಂದು ತಿಳಿಸಿರುವರು.

ಕಾಶಿಯಲ್ಲಿ ಶ್ರೀ ಲೀಲಾಧರ್ಮಶಾಸ್ತ್ರಿಗಳವರು ೯೧ ಗಂಟೆಗಳಕಾಲದಲ್ಲಿ ೧೯೧॥ ಮೈಲು ನಡೆದು ಪ್ರಪಂಚರಿಕಾರ್ಡನ್ನು ಸ್ಥಾಪಿಸಿದರು. ೧೦೦ ಗಂಟೆಗಳಕಾಲ ನಡೆಯಬೇಕೆಂಬ ಉದ್ದೇಶ್ಯವು ಅವರಿಗಿರಲು, ಡಾಕ್ಟರರ ಸಲಹೆಯಂತೆ ೯೧ ಗಂಟೆಗಳಕಾಲ ಮಾತ್ರ ನಡೆದರು.

ವಿಶ್ವವಿದ್ಯಾಲಯದ ಗೇಟು

ಈ ಪರೀಕ್ಷೆಯೂ ತಡವೆ ದಾಟಿದ ಬಳಿಕ, ವಿಶ್ವವಿದ್ಯಾಲಯದ ಗೇಟು ಒಳಿ ನಿಂತು, ಉಮೇದ್ವಾರನು ತನ್ನ ಜಾತಕವನ್ನು ಹೊರಡಿಸಿ, ಸರಸ್ವತಿಯ ಅನುಗ್ರಹಕ್ಕಾಗಿ ಕಾದು ನಿಲ್ಲುವನು. ೨೦ ಸಾವಿರ ಉಮೇದುವಾರರ. ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಹಾಜರಾಗವರು; ೪ ಸಾವಿರವೇನೋ ಮುಂದಣ ವಿದ್ಯಾಭ್ಯಾಸ ಹೊಂಟಿಲು ಯೂನಿವರ್ಸಿಟಿ ಸೇರುವರು. ಮಿಕ್ಕುಳಿದ ೧೬ ಸಾವಿರಕ್ಕೆ ಇಹಪರ ಎರಡೂ ಇಲ್ಲ. ಇವರಿಗಾಗಿ ವ್ಯಯವಾದ ಧನ, ಆಯುಷ್ಯ, ಪ್ರಯತ್ನಗಳೆಲ್ಲವೂ ಯಾವ ಕೆಲಸಕ್ಕೂ ಭಾರದ ಅಪವ್ಯಯ, ಅನಾವ್ಯಯವಾಗಿವೆ ಎಂದೇ ವಿಮರ್ಶಕರು ದೂರ ತ್ತಿರುವರು. ಮುಂದೆ ನಡೆಸುವ ಜೀವನಕ್ಕೆ ಸಂಬಂಧವೇ ಇಲ್ಲದೆ ಈ ವಿದ್ಯಾಭ್ಯಾಸ ದಿಂದೇನು ?

ಧರ್ಮಬದಲಾಯಿಸುವ ಬದಲಾಗಿ ಪ್ರಾಣತ್ಯಾಗವಾಡಿದನು !

ಖ್ವಾನ್ಹಾ ಪಿಶಾಂಗಾನು ಜಾರ್ಡಸೆಂಬ ೧೮ ವರ್ಷದ ಹರಿಜನ ಯುವಕನೊಬ್ಬನು ೬೦ ಅಡಿ ಎತ್ತರವಿರುವ ಗೋದಾವರಿ ಸಂಕದ ಮೇಲಿಂದ ನೀರಿಗೆ ದುಮುಕಿ ಪ್ರಾಣತ್ಯಾಗಮಾಡಿಕೊಂಡನು. ಡಾ|| ಅಂಬೇಡ್ಕರರು ಹರಿಜನರು ಹಿಂದೂ ಧರ್ಮವನ್ನು ತ್ಯಜಿಸಬೇಕಾಗಿ ಮಾಡಿದ ನಿರ್ಧಾರದ ವಿಚಾರದಲ್ಲಿ, ನಾಸಿಕದಲ್ಲಿ ಮೊನ್ನೆ ನಡೆದ ಪಂಡಿತ ಮಾಳವೀಯರ ಭಾಷಣಗಳೂ, ಇವನಿಗೆ ದಹಳವಾಗಿ ನಾಟಿದುದರಿಂದಲೇ ಅವನು ಈ ರೀತಿ ವರ್ತಿಸಲು ಕಾರಣವಂತೆ. ಜಾರದವನು ಹಿಂದೂ ಧರ್ಮಪ್ರೇಮಿಯು. ಆದರೆ, ತೋಟವೃತ್ತಿಯಲ್ಲಿ ನಡೆಯಿಸಲು ಇವನಿಂದ ಇಷ್ಟವಿರಲಿಲ್ಲ. ಆದರೂ ಹಿಂದೂ ಧರ್ಮವನ್ನು ತ್ಯಜಿಸುವುದು ನ್ಯಾಯವಲ್ಲವೆಂದು ಇವನ ದೃಢವಾದ ನಂಬಿಗೆ ಡಾ|| ಅಂಬೇಡ್ಕರರ ಭಾಷಣಗಳಿಗಿಂತ ಇವನ ಕೋಣೆಯೊಳಗೆ ತುಂಬಾ ದೊರಕಿವೆ ಜಾರದವನು ಈ ಸಮಸ್ಯೆಯ ಮೇಲೆ ದೀರ್ಘಕಾಲ ಆಲೋಚಿಸಿ, ಕೊನೆಗೆ ಹಿಂದೂ ಧರ್ಮವನ್ನು ತ್ಯಜಿಸುವುದಕ್ಕಿಂತ ಪ್ರಾಣತ್ಯಾಗವೇ ಶ್ರೇಷ್ಠವೆಂದು ಭಾವಿಸಿ ಹೀಗೆ ವರ್ತಿಸಿದನಂತೆ. ಹರಿಜನರು ಹಿಂದೂ ಧರ್ಮವನ್ನು ತ್ಯಜಿಸುವುದು ಎಂದಿಗೂ ಯೋಗ್ಯವಲ್ಲ ಆದರೆ ಹರಿಜನೋದ್ಧಾರಕಾರ್ಯವನ್ನು ಒಹಳ ಶ್ರದ್ಧೆಯಿಂದ ನಡೆಯಿಸಬೇಕಾಗಿದೆ. [ಸ್ವ.

ಕಳೆದವಾರ ಒಕಿದಾ ಹಬ್ಬದಲ್ಲಿ ಮದರಾಸಿನ ಕ್ರಿಸೆಂಟು ಸಂಘದ ನೇತೃತ್ವದಲ್ಲಿ ಒಂದು ಸಾರ್ವಜನಿಕ ಸಭೆಯು ಜರುಗಿತು. ಅನೇಕ ಜಾತಿ ವರ್ತಮತದ ಜನರು ಮುಸ್ಲಿಮರೊಡನೆ ಕೂಡಿದ್ದರು. ಹಿಂದೂ-ಮುಸ್ಲಿಂ ಐಕ್ಯ ತ್ಯವಾಗಬೇಕೆಂದೂ, ಭಾರತೀಯರು ಕೋಮುವಾರು ಭೇದವನ್ನು ಮರೆತಿಬಿಡಬೇಕೆಂದೂ ಭಾಷಣಗಳಾದುವು. ಅಲ್ಲಿನ ಪ್ರಮುಖರಾದ ಡಾ|| ಪಿ. ವರದರಾಜುಲು ನಾಯಡುರವರು ಸಭೆಯ ಅಧ್ಯಕ್ಷರಾಗಿದ್ದರು.

ಕಾಕಿನಾಡಿನಲ್ಲಿ ನಡೆದ ಆಂಧ್ರರಾಷ್ಟ್ರ ಮಹಿಳಾ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀಮತಿ ಕಾಮೇಶ್ವರಮ್ಮನವರು, ಅವರ ಭಾಷಣೆಯಲ್ಲಿ ಹೇಳಿದ ಕೆಲವು ಅಮೂಲ್ಯ ನುಡಿಗಳು—

"ಲಾಠಿಗಳ ನಡುವೆ ವೀರನೃತ್ಯವನ್ನು ಮಾಡಿದರು ಲಲನೆಯರು. ಕಾರಾಗೃಹಗಳಲ್ಲಿ ಹಸುಮಕ್ಕಳನ್ನು ಹೆತ್ತರು ಕಾಂತಾಮಣಿಗಳು. ಪುರುಷರನ್ನೂ, ಮಕ್ಕಳನ್ನೂ ಹೋರಾಟಕ್ಕಾಗಿ ಕಳುಹಿಸಿ ಹೊಟ್ಟೆಯನ್ನು ಸುಟ್ಟುಕೊಂಡರು ಹೆಂಗಸರು. ದೇವತೆಗಳು ಕಂಡು ಪುಷ್ಪವರ್ಷವನ್ನು ಸುರಿಸುವೆದೃಶ್ಯವು ಅದು. ಕಾಂತೆಯು ಕಣ್ಣುಗಳನ್ನು ತೆರೆದು ನೋಡುತ್ತಿರುವಳು. ಜಾತಿಯೆಲ್ಲವೂ ಚೈತನ್ಯತೆಯನ್ನು ಹೊಂದುತ್ತಲಿದೆ. ಸ್ವಾತಂತ್ರ್ಯ ದೇವತೆಯು ನೃತ್ಯವನ್ನು ಮಾಡುತ್ತಿರುವಳು! ಎಚ್ಚತ್ತವರಿಗೇ ಆ ಸ್ವರ್ಗೀಯ ಸುಖಾನಂದಗಳು"

ದೆಹಲಿ ಕೈಗಾರಿಕೆ ಪ್ರದರ್ಶನದಲ್ಲಿ ಮೈಸೂರಿನ ಸರವಾಗಿ ೩ ಅಂಗಡಿಗಳಿವೆ ಎಂದು ತಿಳಿಯಬಂದಿದೆ.

ಹಿತಿಯೂ-ದ್ವೀಪದಲ್ಲಿ ಕ್ಷಾಮದ ಹಾವಳಿ ತುಂಬಾ ಆಗಿರುವುದೆಂದು ಬಂಗಾಳ ಸರ್ಕಾರದವರಿಗೆ ಮನವಿ ಬಂದಿದೆ.

ಜಾಜ್‌ಹ್ಯೂಸ್ ಎಂಬಾತನಿಗೆ ೯೬ ವರ್ಷ. ಅವನ ಹೆಂಡತಿಗೆ ೨೦ ವರ್ಷ. ಅವನಿಗೆ ಈಗ ಒಂದು ಮಗುವಿದೆಯಂತೆ !

ಸಾಂಗ್ಲಿಯಲ್ಲಿ ನೆಡೆಯಲು ತೀರ್ಮಾನವಾಗಿದ್ದ ಹಿಂಸಾಯುಕ್ತವಾದ ಯಜ್ಞವು ನಿಲ್ಲಿಸಲ್ಪಟ್ಟಿರುವದಾಗಿ ತಿಳಿಯಬಂದಿದೆ.

ಸೂರ್ಯನಮಸ್ಕಾರವನ್ನು ಇಂಗ್ಲೆಂಡಿನಲ್ಲಿ ಪ್ರಚಾರಮಾಡುವದಕ್ಕಾಗಿ ಜಾಂಧ್ರರಾಜರು ತಮ್ಮ ಮೊಮ್ಮಗಳೊಡನೆ ಲಂಡನ್ನಿಗೆ ಪ್ರಯಾಣಮಾಡಿರುವರು.

ಬೆಳಗಾಂ ಡಿಸ್ಟ್ರಿಕ್ಟಿನ ಹೊಸರಿಥಿ ಎಂಬಲ್ಲಿ ಗಾಂಧಿ ಆಶ್ರಮದವರು ಹಾಕಿದ್ದ ರಾಷ್ಟ್ರಧ್ವಜವನ್ನು ಸರ್ಕಾರದವರು ತೆಗೆದುಹಾಕಿದವರೆಂದೂ, ಸ್ವಲ್ಪ ಗಲಾಟೆಯಾಗಿದೆಯೆಂದೂ ತಿಳಿಯಬಂದಿದೆ.

ಚಿಕಾಗೋವಿನಲ್ಲಿ ವಾಟ್ರಿಕಾ ಮ್ಯಾಗೂರಿ ಎಂಬ ೨೫ ವರ್ಷದ ಯುವತಿಯು ೫ ವರ್ಷಗಳಿಂದಲೂ ನಿದ್ರಿಸುತ್ತಿರುವಳಂತೆ. ಡಾಕ್ಟರುಗಳು ಏನೂ ಹೇಳದೆ ಇರುವರು !

ಮೈಸೂರು ಸಕ್ಕರೆ ಕಾರ್ಖಾನೆಗೆ ಕಳೆದ ವಾರ ನಮ್ಮ ಶ್ರೀಮನ್ಮಹಾರಾಜರೂ, ದಿವಾನ್‌ರವರೂ ಭೇಟಿ ಕೊಟ್ಟರೆಂದು ತಿಳಿಯಬಂದಿದೆ.

ಶಿವಮೊಗ್ಗಾದಿಂದ ಸಾಗರಕ್ಕೆ ರೈಲ್ವೆ ಲೈನನ್ನು ಹಾಕಬೇಕೆಂಬ ಸರ್ಕಾರದ ಆರ್ಡರ್‌ ಪ್ರಕಾರ ಕೆಲಸವು ಸುರುವಾಗಿದೆ.

ಬೆಂಗಳೂರಿನ ತಾತಾ ವಿಜ್ಞಾನ ಸಂಸ್ಥೆಗೆ 1936-37 ರಲ್ಲಿ 6 ಲಕ್ಷ ರೂಪಾಯಿ ಖರ್ಚೆಂದು ಅಂದಾಜುಮಾಡಲಾಗಿದೆ.

ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯೂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯ ವಿರುವ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯ ವೂ ಶಕ್ತಿಯೂ ಅತಿ ಮುಖ್ಯವಾದುವು ; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಪಾರಮಾರ್ಥಿಕ ದೃಷ್ಟಿಯಿಂದ ನೋಡಿದರೂ ವ್ರತ, ನಿಯಮ, ಭಗವದ್ಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವುದಕ್ಕೂ ಶಕ್ತಿಯು ಅತ್ಯಗತ್ಯವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತಮ್ಮ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯು ಇರಲೇಬೇಕು. ಮಾನವನಿಗ ಅದೊಂದು ಜೀವನದ ತತ್ವವಾದ ಶಕ್ತಿಯು ಯಾರಿಗೆ ಬೇಡ ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ ! ಸಂಗೀತಗಾರರು ತಮ್ಮ ಮಾನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶಾರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ ! ಹೆಚ್ಚೇಕೆ --ಮನುಷ್ಯ ಮಾತ್ರದವರಿಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಅವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯ ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪರಮೇಶ್ವರನೊಡನೆ ಯುದ್ಧಮಾಡಿ ಆತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮ-ಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಂಥಾದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯಮಾಡಿದುದೂ ಶಕ್ತಿಯೇ ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪೂಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ ವಸ್ತು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ವಜ್ರಕಾಯಕರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಶಿಸಿರುತ್ತಾರೆ. ಇದರ ಶ್ರೇಷ್ಠತೆಯ್ತು ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ಮೆಡಲುಗಳೂ, ಸರ್ಟಿಫಿಕೇಟುಗಳೂ ಬಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿಲ್ಲದ, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಅಮೋಘ ವನಸ್ಪತಿಗಳಿಂದ ತಯಾರಾದುದು. ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಆಹಾರ ಪಾನೀಯ ನಿಯಮವಾಗಲೀ, ಕಠಿಣ ಪಥ್ಯವಾಗಲಿ ಇಲ್ಲ ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು ; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡು ಬರುವುದು.

ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಆನಂದಿಸಿರಿ

ವಿವಿಧ ವಿಚಾರಗಳಿಂದ ವಿರಾಜಿಸುತ್ತದೆ.

ತಾತ್ಕಾಲಿಕ ಉಪಯುಕ್ತ ಮತ್ತು ದೀರ್ಘಹಿತದಾಯಕವಾದ
ಅನೇಕಾನೇಕ ವಿಷಯಗಳನ್ನೂ
ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ,
ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.
ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಕ್ಕೆ 1—0—0
(ಅಂಚೆವೆಚ್ಚ ಸೇರಿ) ಪರಸ್ಥಳಕ್ಕೆ 1—10—0 ಬಿಡಿಪ್ರತಿ ಪೈ

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭ ಛಾರ್ಜಿಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.

ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರಾದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "ಶಕ್ತಿಸುಧೆ" ಯು ನವತೇಜಸ್ಸನ್ನೂ ಬಲಶುಷ್ಟಿ ಪುಷ್ಟಿಯನ್ನೂ ಉಂಟು ಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ಪರಿಶ್ರಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "ಶಕ್ತಿಸುಧೆ" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"ಶಕ್ತಿಸುಧೆ" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟು ಮಾಡುವುದರಿಂದ ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ಕಂದುಕೊಡುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಬರುವ ಸೊಂಟನೋವು, ಹೊಟ್ಟೆನೋವು, ಅಕ್ರಮಸೂತಕವನ್ನೂ, ನಿಶ್ಶಕ್ತಿಯನ್ನೂ ಗುಣಪಡಿಸಿ ಅವರ ಸಹಜವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳ ಪಾಠಗಳನ್ನು ಚೆನ್ನಾಗಿ ಕಲಿಯುವದಕ್ಕೂ, ಕಲಿತುದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "ಶಕ್ತಿಸುಧೆ" ಯು ವರಪ್ರಸಾದವು

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "ಶಕ್ತಿಸುಧೆ" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದಂಲ್ಲಿ ಅವ್ಯರ್ಥವಾಗಿ ಸಾಯವಾದ "ಶಕ್ತಿಸುಧೆ" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ಟಿ. ಖ ಬೇರೆ. ಚಿಕ್ಕ ಡಬ್ಬಿ 4 ಆಣೆ

ವಿಳಾಸ—ಶಕ್ತಿಸುಧಾ ಕಾರ್ಯಾಲಯ, ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು

Weekly Newspaper

SATYAVADI

Every Wednesday

MYSORE (Founded 1917) 25—3—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಬಿಸಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ಓದುಗರ ಕೈಸೇರುವುದು.

ಅಪಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಒರೆಯಿಲ್ಪಟ್ಟ ವಿದ್ವತ್ತಾಪ್ರಚುರವಾದ ಲೇಖನಗಳಿಂದ ಕೂಡಿದ- ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಪರಿಚಯ ಹಾಗು ಭಾವಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹೊಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಏಕಾರದ ೨೫೦—೩೫೦ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಚಾಹೀರಾತುಗಾರರು ಬೇಗನೆ ತಮ್ಮ ತಮ್ಮ ಜಾಹೀರಾತುಗಳನ್ನು ಅಡ್ವಾನ್ಸ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ ಕೇಂದ್ರಗಳಲ್ಲಿ ಅದರ ಮಾರಾಟಕ್ಕಾಗಿ ಏಜೆಂಟರು ಬೇಕು.

ನೂರಕ್ಕೆ ೧೫ ೨೦ ವರೆಗೆ ಕಮಿಷ್ ಕೊಡಲಾಗುವುದು ಹೊತರ್ಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿಪೊಜಿಟ್ ಹಣ ಕಿಡಲು ಸಮರ್ಥರಿರುವ ಜನರಷ್ಟೇ ಉತ್ತರಕ್ಕಾಗಿ ೧ ಆಣೆ ಸ್ಟಾಂಪನ್ನಿಟ್ಟು ವಿಶೇಷ ವಿವರಗಳಿಗಾಗಿ ಬರೆದುಕೊಳ್ಳಬೇಕು.

ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

Sadhana Aushadalaya
Dacca (Bengal)

ಸಾಧನ ಔಷಧಾಲಯ, ಢಕ್ಕ

ಅಧ್ಯಕ್ಷರು--ಭಾಗಲ್ಪುರದ ಮಾಜಿ ರಸಾಯನಶಾಸ್ತ್ರ ಪಂಡಿತರಾಗಿದ್ದ ಮ॥ ಜೋಗೀಷಚಂದ್ರ ಘೋಸು ಎಂ. ಎ ಎಫ್.ಸಿ ಎಸ್. ಲಂಡನ್.

ಆಯುರ್ವೇದ ಶಾಸ್ತ್ರಕ್ಕೆ ಅನುಸಾರವಾಗಿ ಔಷಧಗಳು ತಯಾರಿಸಲ್ಪಡುತ್ತವೆ. ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ವಿವರವನ್ನು ತಿಳಿಸಿದರೆ ಫಾರ್ಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

ಮಕರಧ್ವಜ—ಸಕಲ ರೋಗಗಳನ್ನೂ ನಿವಾರಿಸುತ್ತದೆ. ಸರ್ವಥಾ ವಿಶ್ವಾಸಾರ್ಹವಾದದ್ದು. ವಾತ, ಪಿತ್ತ, ಕಫವನ್ನು ಸಂಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಾಕ್ಕೆ ೪ ರೂಪಾಯಿ.

ಸರೀಬಾದಿಸರ್ಪ—ಪ್ರಮೇಹ, ಸವಾಯಿ ರೋಗಗಳಿಗೆ ಅನೋಘ ಔಷಧವಾದ ರಸ, ವಿಷವನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ, ರಕ್ತವನ್ನು ಶುದ್ಧಿಪಡಿಸುತ್ತದೆ. ಬೆಲೆ ಸೇರು ೫ ರೂಪಾಯಿ.

ಶುಕ್ರಸಂಜೀವಿನಿ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ಧಾತು ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧಕ ಔಷಧ ಬೆಲೆ ಸೇರು ೧೬ ರೂಪಾಯಿ.

ಅಬಾಲಾಂಧವಯೋಗ—ನಡುನೋವು, ಮುಟ್ಟುದೋಷ, ಒಂಜೆತನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ಹೊತ್ತಿಗೆ ೨ ರೂಪಾಯಿ ಮತ್ತು ೫೦ ಹೊತ್ತಿಗೆ ೫ ರೂ.

H. S. KAMAL SHERIFF, DENTIST

Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

Oriental Pharmacy

Geueral Hospital Road

MYSORE

fOr

Best Unani Medicines